**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ರವರ ನ್ಯಾಯಾಲಯ ಶ್ರೀನಿವಾಸಪುರ.**

***ಸಿ.ಸಿ. ಸಂಖ್ಯೆ: 1623/2023***

***ಫಿರ್ಯಾದಿದಾರರು:*** *ರಾಜ್ಯಪರ ಶ್ರೀನಿವಾಸಪುರ ಪೊಲೀಸರು.*

**ವಿರುದ್ಧ**

***ಆರೋಪಿ :*** *ರಾಜಮ್ಮ, 52 ವರ್ಷ,*
*ಕೋಂ ಸೀನಪ್ಪ ಅಲಿಯಾಸ್ ಶ್ರೀನಿವಾಸಪ್ಪ,*
*ವಾಸ : ಯಲ್ದೂರು ಗ್ರಾಮ,*
*ಶ್ರೀನಿವಾಸಪುರ ತಾಲ್ಲೂಕು.*

## ಆಪಾದನೆ ಸಾರಾಂಶ

***ಶ್ರೀ ಮನು ಬಿ .ಕೆ., ಬಿ.ಎ.ಎಲ್., ಎಲ್.ಎಲ್.ಎಂ.,*** *ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ , ಶ್ರೀನಿವಾಸಪುರ ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಿಸುತ್ತಿದ್ದೇನೆ.*

*ದಿನಾಂಕ: 18.08.2023 ರಂದು ಬೆಳಗ್ಗೆ ಸುಮಾರು 8.00 ಗಂಟೆ ಸಮಯದಲ್ಲಿ ಚಾಸಾ 1 ರವರನ್ನು ಕುರಿತು ಆರೋಪಿಯಾದ ನೀವು ಕೋಳಿ ವಿಚಾರವಾಗಿ ಗಲಾಟೆ ಮಾಡಿದ್ದು ಲೇ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.*

*ಎರಡನೇಯದಾಗಿ, ಆರೋಪಿಯಾದ ನೀವು ನೀಲಗಿರಿ ಕೋಲನ್ನು ಎತ್ತಿಕೊಂಡು ಚಾಸಾ 1 ರವರ ತಲೆಗೆ ಮತ್ತು ಎಡಗೈಗೆ ಹೊಡೆದು ಗಾಯ ಉಂಟುಮಾಡಿರುತ್ತೀರಿ . ಈ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.*

ದಿನಾಂಕ: 23**.07.2024** **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.**